**ದಿನಾಂಕಃ 08–07–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಡೆಪ್ಯುಟಿ ಡಿಫೆನ್ಸ್ ಕೌನ್ಸಿಲ್ ರವರಿಂದ ಆರೋಪಿ ಪರವಾಗಿ**

7. ದಿಃ20.07.2023ರಂದು ನಾನು ಹೊಳೇನರಸೀಪುರದ ಬಿ ಇ ಒ ಕಚೇರಿಗೆ ಬೆಳಿಗ್ಗೆ 9.30 ಗಂಟೆ ಸಮಯಕ್ಕೆ ಹೋಗಿರುತ್ತೇನೆ. ಮಹಜರ್ ಕಾಲಕ್ಕೆ ಸಾಕ್ಷಿದಾರರಾಗಿ ಹಾಜರಿದ್ದು ಸಹಕರಿಸುವಂತೆ ನನಗೆ ತನಿಖಾಧಿಕಾರಿ ನೋಟೀಸು ನೀಡಿರಲಿಲ್ಲ ನನ್ನ ಹಿರಿಯ ಅಧಿಕಾರಿಗಳು ಮೌಖಿಕವಾಗಿ ತಿಳಿಸಿದ್ದರು. ಬಿ ಇ ಒ ಆಫೀಸ್ ಪಕ್ಕದಲ್ಲಿಯೇ ಹೊಳೇನರಸೀಪುರದ ಸಿಪಿಐ ಕಚೇರಿ ಇರುತ್ತದೆ. ಪೊಲೀಸರು ಘಟನೆಯ ಸಂಬಂಧ ನಮ್ಮ ಮುಂದೆ ಆರೋಪಿಯನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿತ ಘಟನೆಯ ಬಗ್ಗೆ ಮಾಹಿತಿ ನೀಡುವ ಮೊದಲು ಘಟನೆಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಆರೋಪಿ ಘಟನೆಯ ಬಗ್ಗೆ ಹೇಳುವ ಪೂರ್ವದಲ್ಲಿ ನನಗೆ ಆರೋಪಿತನ ಹಾಗೂ ಆತನ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಆರೋಪಿತ ಹಾಜರುಪಡಿಸಿದ ಟ್ಯಾಗ್ ಇರುವ ಐಡಿ ಕಾರ್ಡು ಜಾಕಿ ಕಂಪನಿಗೆ ಸೇರಿದ ಐಡಿ ಕಾರ್ಡು ಆಗಿತ್ತು. ಸದರಿ ಟ್ಯಾಗ್ ನೀಲಿ ಬಣ್ಣದ ಟ್ಯಾಗ್ ಆಗಿತ್ತು. ಆರೋಪಿತ ಹಾಜರುಪಡಿಸಿದ ಶರ್ಟು ಗುಲಾಬಿ ಬಣ್ಣದ ಸಿಮೆಂಟ್ ಬಣ್ಣದ ಗೆರೆ ಇರುವ ಶರ್ಟು ಆಗಿತ್ತು. ಸದರಿ ಶರ್ಟು ಯಾವ ಕಂಪನಿಗೆ ಸೇರಿದ ಶರ್ಟು ಎಂದು ನನಗೆ ತಿಳಿದಿಲ್ಲ. ಆರೋಪಿತ ಹಾಜರುಪಡಿಸಿದ ಶರ್ಟಿನ ಎಡತೋಳಿನ ಮೇಲೆ ರಕ್ತದ ಕಲೆಗಳು ಇದ್ದವು. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಲ್ಲ ಹಾಗೂ ನನ್ನ ಸಮಕ್ಷಮ ಆರೋಪಿತನಿಂದ ಶರ್ಟು, ಪ್ಯಾಂಟು, ಬನಿಯನ್, ಐಡಿ ಕಾರ್ಡು ಹಾಗೂ ಮಾಸ್ಕನ್ನು ಅಮಾತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

8. ನಾನು ಸರ್ಕಾರಿ ನೌಕರನಾಗಿರುವ ಕಾರಣ ಯಾವುದಾದರೂ ತನಿಖೆಯಲ್ಲಿ ಸಹಕರಿಸಲು ನನಗೆ ನಮ್ಮ ಕಚೇರಿಯಿಂದ ಲಿಖಿತವಾಗಿ ಆದೇಶಿಸಬೇಕಾಗುತ್ತದೆ ಎಂದರೆ ತುರ್ತು ಪ್ರಕರಣಗಳಲ್ಲಿ ಹಿರಿಯ ಅಧಿಕಾರಿ ನಮಗೆ ಮೌಖಿಕವಾಗಿ ನಿರ್ದೇಶನ ನೀಡಿದರೂ ಸಹ ನಾವು ಪಾಲಿಸಬೇಕಾಗುತ್ತದೆ. ನಾನು ಸಿಪಿಐ ರವರ ಕಚೇರಿಗೆ ಹೋಗಿಲ್ಲ ಹಾಗೂ ಯಾವುದೇ ತನಿಖೆಗೆ ಸಹಕರಿಸಿಲ್ಲ ಮತ್ತು ಮಹಜರಿಗೆ ನನ್ನ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–13 ಮಹಜರನ್ನು ಓದಿದ ನಂತರ ನಾನು ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂಬುದು ನನಗೆ ತಿಳಿದಿದೆ. ನಿಪಿ–13 ಮಹಜರನ್ನು ಮಧ್ಯಾಹ್ನ 2.30 ರಿಂದ 3.30 ಗಂಟೆಯವರೆಗೆ ಬರೆಯಲಾಗಿದೆ. ಠಾಣೆಯ ಸಿಬ್ಬಂದಿ ರವರು ಮಹಜರನ್ನು ಬರೆದಿದ್ದು ನನಗೆ ಅವರ ಹೆಸರು ತಿಳಿದಿಲ್ಲ. ನಾನು ನಿಪಿ–13 ಮಹಜರಿಗೆ ಸಹಿ ಮಾಡಿದ ಕಾಲದಲ್ಲಿ ಚಾಸಾ–8 ಪ್ರತಾಪ್ ಕುಮಾರ್ ರವರು ಹಾಗೂ ಪೊಲೀಸ್ ಸಿಬ್ಬಂದಿಗಳು ಸಹ ಹಾಜರಿದ್ದರು.

9. ನಿಪಿ–13 ಮಹಜರ್ ಆದ ಕೂಡಲೇ ಅಲ್ಲಿಂದ ಎಸ್ ಅಂಕನಹಳ್ಳಿ ಫಾರೆಸ್ಟ್‌ಗೆ ಹೋಗಲಾಗಿರುತ್ತದೆ. ಪೊಲೀಸ್ ಜೀಪಿನಲ್ಲಿ ಪಂಚರಾದ ನಾನು ಚಾಸಾ–8 ಪ್ರತಾಪ್, ಆರೋಪಿ, ತನಿಖಾಧಿಕಾರಿ ಹಾಗೂ ಇತರೆ ಸಿಬ್ಬಂದಿಯವರು ಹೊರಟಿರುತ್ತೇವೆ. ಜೀಪಿನಲ್ಲಿದ್ದ ಇತರೆ ಪೊಲೀಸ್ ಸಿಬ್ಬಂದಿಗಳ ಹೆಸರು ನನಗೆ ತಿಳಿದಿಲ್ಲ. ಘಟನಾ ಸ್ಥಳಕ್ಕೆ ಹೋದ ಕಾಲದಲ್ಲಿ ಬಹಳಷ್ಟು ಜನ ಸೇರಿದ್ದರು ನನಗೆ ಅವರುಗಳ ಹೆಸರು ತಿಳಿದಿಲ್ಲ. 5–10 ಅಡಿ ದೂರದಿಂದ ನಾನು ಮೃತ ಅಂಬಿಕಾರವರ ಮೃತದೇಹವನ್ನು ನೋಡಿರುತ್ತೇನೆ. ಅಂಬಿಕಾರವರ ಮೃತದೇಹದ ಬಳಿ ಬಿದ್ದಿದ್ದ ಕಲ್ಲು ದಪ್ಪ ಕಲ್ಲು ಆಗಿದ್ದು ಓರ್ವ ವ್ಯಕ್ತಿ ಅದನ್ನು

ಎತ್ತಬಹುದಾಗಿತ್ತು. ಸದರಿ ಕಲ್ಲಿನ ಮೇಲೆ ರಕ್ತದ ಕಲೆ ಹಾಗೂ ಮಣ್ಣು ಆಗಿತ್ತು. ಸ್ಥಳದಲ್ಲಿ ಬಿದ್ದಿದ್ದ ಒಂದು ಜೊತೆ ಚಪ್ಪಲಿ ವಾಕ್ ಮೇಟ್ ಕಂಪನಿಗೆ ಸೇರಿದ ಚಪ್ಪಲಿ ಆಗಿತ್ತು. ಸಿಮೆಂಟ್ ಕಲರ್ ನ ಚಪ್ಪಲಿ ಆಗಿತ್ತು. ಸದರಿ ಚಪ್ಪಲಿಗೆ ರಕ್ತ ಆಗಿತ್ತು. ಆರೋಪಿತ ನಮ್ಮನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಹಾಗೂ ಘಟನಾ ಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ನಿಪಿ–20 ರಂತೆ ಯಾವುದೇ ಮಹಜರ್ ತಯಾರಿಸಿಲ್ಲ ಹಾಗೂ ಮುಮಾ–6 ರಿಂದ 10 ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ–21 ರಿಂದ 23 ಫೋಟೋಗಳಲ್ಲಿ ಅದನ್ನು ಯಾವ ದಿನಾಂಕದಂದು ತೆಗೆಯಲಾಗಿದೆ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ. ನಿಪಿ–21 ರಿಂದ 23 ಫೋಟೋಗಳನ್ನು ಆರೋಪಿತ ನಮ್ಮನ್ನು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋದ ದಿನವೇ ಪೊಲೀಸ್ ಸಿಬ್ಬಂದಿಗಳು ತೆಗೆದಿರುತ್ತಾರೆ. ಸ್ಥಳದಲ್ಲಿ ಪೊಲೀಸರು ಫೋಟೋಗಳನ್ನು ಕ್ಯಾಮರಾ ಹಾಗೂ ಮೊಬೈಲ್ ನಿಂದ ತೆಗೆದರು. ನಾನು ಕೃತ್ಯ ನಡೆದ ಸ್ಥಳದಲ್ಲಿ ತಯಾರಿಸಲಾಗಿರುತ್ತದೆ ಎನ್ನಲಾದ ಯಾವುದೇ ಮಹಜರಿಗೆ ಹಾಜರಿದ್ದು ಸಹಿ ಮಾಡಿದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣಕ್ಕೂ ಹಾಗೂ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿ ಕಂಡು ಬರುವ ಸಹಿಗಳನ್ನು ನಾನು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮುಮಾ–6 ರಿಂದ 8 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿ ಕಂಡು ಬರುವ ಸಹಿಗಳನ್ನು ನಾನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ

ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.